ಶ್ರೀ ಪುಟ್ಟಸ್ವಾಮಿ ಗೌಡ.—ನಾನು ತಮ್ಮನ್ನು ಸವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನನ್ನ ಅಭಿಪ್ರಾಯ ಏನು ಎಂಬುದನ್ನು ಸಭೆಯಲ್ಲಿ ತಿಳಿಸಬೇಕಾಗಿದೆ. ದಯವಿಟ್ಟು ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಆರ್. ಎಲ್. ಜಾಲಪ್ಪ.—ಸಹಕಾರಿ ಇಲಾಖೆಯಲ್ಲಿ.....

ಶ್ರೀ ಪುಟ್ಟಸ್ವಾಮಿಗೌಡ.—ತಾವು ಅವಕಾಶ ಕೊಡದಿದ್ದರೆ ಸದನದಲ್ಲಿ ಕುಳಿತು ಏನು ಮಾಡಬೇಕೆಂದು ವಿಷಾದ ವ್ಯಕ್ತಪಡಿಸಬೇಕಾಗಿದೆ. ಒಂದೇ ಒಂದು ನಿಮಿಷ ಅವಕಾಶ ಕೊಟ್ಟರೆ ನನ್ನ ಅಭಿಪ್ರಾಯವನ್ನು ಹೇಳಿಬಿಡುತ್ತೇನೆ. ದಯವಿಟ್ಟು ಅವಕಾಶ ಮಾಡಿಕೊಡಬೇಕೆಂದು ತಮ್ಮನ್ನು ಸವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಈ ಒಂದು ಇಲಾಖೆಯ ರಿಸರ್ವ್ ಫಂಡ್ ೨೧೩.೧೩ ಕೋಟಿ ರೂಪಾಯಿಗಳು. ವರ್ಕಿಂಗ್ ಕ್ಯಾಪಿಟಲ್ ೧೫೪೬ ಕೋಟಿ ರೂಪಾಯಿಗಳು.

ಶ್ರೀ ಪುಟ್ಟಸ್ವಾಮಿ ಗೌಡ.—ಈ ಒಂದು ನೀತಿಯನ್ನು ವಿರೋಧಿಸಿ ನಾನು ಸಭಾ ತ್ಯಾಗವನ್ನು ಮಾಡುತ್ತೇನೆ.

(ಮಾನ್ಯ ಸದಸ್ಯರು ಸಭೆಯಿಂದ ನಿರ್ಗಮಿಸಿದರು)

(ಈ ಹಂತದಲ್ಲಿ ಮಾನ್ಯ ಸದಸ್ಯರು ಸದನದಿಂದ ಹೊರಗೆ ಹೋದರು)

ಶ್ರೀ ಆರ್. ಎಲ್. ಜಾಲಪ್ಪ.—ಇದರಲ್ಲಿ ೦.೨೬ ಕೋಟಿ ಹಣ ದುರುಪಯೋಗವಾಗಿದೆ. ಇದರಲ್ಲಿ ಭಾಗಿಯಾಗಿರುವವರಲ್ಲಿ ಸುಮಾರು ೩೬೦ ಗೆಜೆಟೆಡ್ ಆಫೀಸರ್ಸ್ ಇದ್ದಾರೆ. ಮತ್ತು ೨೮೬೦ ಜನ ನಾನ್ ಗೆಜೆಟೆಡ್ ಆಫೀಸರ್ಸ್ ಇದ್ದಾರೆ. ರಾಜ್ಯದಲ್ಲಿರುವ ಒಟ್ಟು ಸಹಕಾರಿ ಸಂಘಗಳ ಸಂಖ್ಯೆ ೨೩,೮೪೪. ಇದರಲ್ಲಿ ಲಿಕ್ವಿಡೇಟ್ ಆಗಿರತಕ್ಕಂತಹ ಸೊಸೈಟಿಗಳು ೪೫೧೨. ಮತ್ತು ಡೀಫಂಕ್ಟ್ ಆಗಿರತಕ್ಕಂತಹ ಸೊಸೈಟಿಗಳು. ಅಂದರೆ ಕೆಲಸ ಮಾಡದೇ ಇರುವ ಸಹಕಾರಿ ಸಂಘಗಳು ೫೦೪೪. ಈ ರೀತಿ ಕೆಲಸ ಮಾಡದಿರುವ ೫೦೪೪ ಡೀಫಂಕ್ಟ್ ಸೊಸೈಟಿಗಳನ್ನು ಕೂಡಲೇ ಲಿಕ್ವಿಡೇಷನ್ ಮಾಡಬೇಕೆಂದು ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಈ ಸೊಸೈಟಿಗಳನ್ನು ಲಿಕ್ವಿಡೇಷನ್ ಮಾಡಿದ ಮೇಲೆ ಅಲ್ಲಿ ಅಧಿಕಾರೇತರರನ್ನು ನೇಮಿಸಿ ಈ ಸಹಕಾರಿ ಸಂಸ್ಥೆಗಳನ್ನು ಪುನರುಜ್ಜೀವನಗೊಳಿಸುವುದಕ್ಕೆ ನಾನು ಕಾರ್ಯಕ್ರಮ ಕೈಗೊಳ್ಳುತ್ತಿದ್ದೇನೆ.

ಮತ್ತೆ ಸಹಕಾರಿ ಸೊಸೈಟಿಗಳನ್ನು ಆಡಿಟ್ ಮಾಡಿರುವ ವಿಚಾರವಾಗಿ ಹೇಳುವುದಾದರೆ, ೧೯೮೦–೮೧ರಲ್ಲಿ ೧೭.೫೯ ಸೊಸೈಟಿಗಳನ್ನು ಆಡಿಟ್ ಮಾಡಲಾಗಿದೆ. ೧೯೮೧–೮೨ರಲ್ಲಿ ೧೮.೪೦೬ ಸಹಕಾರಿ ಸಂಘಗಳನ್ನು ಆಡಿಟ್ ಮಾಡಲಾಗಿದೆ. ೧೯೮೨–೮೩ರಲ್ಲಿ ೧೮,೬೯೮ ಸಹಕಾರಿ ಸಂಘಗಳನ್ನು ಆಡಿಟ್ ಮಾಡಲಾಗಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಜೂನ್ ತಿಂಗಳಿಂದ ಜುಲೈ ೩೦ರ ವರೆಗೆ ೧೧,೦೬೦ ಸಹಕಾರಿ ಸಂಘಗಳನ್ನು ಆಡಿಟ್ ಮಾಡಲಾಗಿದೆ.

ಮಾನ್ಯ ರಂಗನಾಥ್‌ರವರು ಈ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆಯಲ್ಲಿ ಭಾಗವಹಿಸುತ್ತಾ, ಜಿಲ್ಲಾ ಬ್ಯಾಂಕಿನ ಹಾಗೂ ರಾಜ್ಯ ಭೂ ಅಭಿವೃದ್ಧಿ ಬ್ಯಾಂಕುಗಳ ಸ್ಥಿತಿ ಆಪೋಷನೂ ಚೆನ್ನಾಗಿರಲಿಲ್ಲ. ಆದರೆ ನಾನು ಅಧಿಕಾರವನ್ನು ಪಡೆದುಕೊಂಡ ಮೇಲೆ ಸ್ವಲ್ಪ ಮಟ್ಟಿಗೆ ಸುಧಾರಣೆಯಾಯಿತು ಎಂಬುದಾಗಿ ಹೇಳಿದರು. ಅದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಮಂತ್ರಿಗಳು ಅಧಿಕಾರಕ್ಕೆ ಬಂದಮೇಲೆ ಅವರ ಇಲಾಖೆಯಲ್ಲಿ ಬಹಳಷ್ಟು ಬದಲಾವಣೆಗಳನ್ನು ನಿರೀಕ್ಷೆ ಮಾಡಿದ್ದೆ, ಆದರೆ ಯಾವುದೇ ಬದಲಾವಣೆ ಆಗಲಿಲ್ಲವೆಂದು ಮಾನ್ಯ ರಂಗನಾಥ್‌ರವರು ಮಾತನಾಡುತ್ತಾ ಹೇಳಿದರು. ಅಧ್ಯಕ್ಷರೇ, ಸರ್ಕಾರ ಅಧಿಕಾರಕ್ಕೆ ಬಂದಮೇಲೆ, ರೈತರಿಗೆ ಬಡ್ಡಿ ರಿಯಾಯಿತಿಯನ್ನು ೨೮ ಕೋಟಿ ರೂಪಾಯಿಗಳಷ್ಟು ಕೊಡಲಾಯಿತು.

ಶ್ರೀ ಬಿ. ಶಿವಣ್ಣ.—ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಎಂದರೆ ಯಾವ ಸರ್ಕಾರ?

ಶ್ರೀ ಆರ್.ಎಲ್. ಜಾಲಪ್ಪ.—ಇನ್ಯಾವ ಸರ್ಕಾರ ಸ್ವಾಮಿ?